


ಸಿಂಹದ ಮರಿಸೈನ್ಯ: ಪ್ರಜ್ಞಾನಂದ, ಭಾಸ್ಕರನ್ ಅಧಿಬನ್, ಡಿ. ಗುಕೇಶ್ ಮತ್ತು ನಿಹಾಲ್ ಸರೀನ್

ಚಂದ್ರಯಾನದ ಯಶಸ್ಸಿನ ಸಂತಸ ಭಾರತೀಯರನ್ನು ಪುಲಕಗೊಳಿಸಿದೆ. ಅದರ ಬೆನ್ನಿಗೆ, ಪ್ರಜ್ಞಾನಂದನೆಂಬ ಚೋಟು ಮೆಣಸಿನಕಾಯಿಯ ಚದುರಂಗದ ಚಂದಯಾನವೂ ತಕ್ಕಮಟ್ಟಿಗೆ ಯಶಸ್ವಿಯಾಗಿದೆ.

ಬಂಧುಮಿತ್ರರ ಪಾಲಿಗಷ್ಟೇ ಅಲ್ಲ, ಚೆಸ್‌ಪ್ರಿಯರ ಪಾಲಿಗೆಲ್ಲ ಪ್ರಜ್ಞಾನಂದ ನೆಚ್ಚಿನ 'ಪ್ರಗ್ಗು'; ವಿಶ್ವನಾಥನ್ ಆನಂದ್ 'ವಿಶಿ' ಆಗಿರುವಂತೆ. ಚೆಸ್‌ಪ್ರಿಯರ ಪಾಲಿಗೆ ಫಿಡೆ ವಿಶ್ವಕಪ್ 2023ರ ಚಾಂಪಿಯನ್‌ಷಿಪ್ ಪ್ರಜ್ಞಾನಂದನಿಗೆ ಒಲಿಯಲಿಲ್ಲ. ಮ್ಯಾಗ್ನಸ್ ಕಾರ್ಲ್‌ಸನ್ ಎನ್ನುವ ಜೀನಿಯಸ್‌ನ ಜಾದೂವಿನ ಎದುರು ಭಾರತದ ಪೋರನ ಆಟ ಕಳೆಗಟ್ಟಲಿಲ್ಲ. ಆದರೆ, ಟೂರ್ನಿಯುದ್ದಕ್ಕೂ ಪ್ರಗ್ಗು ತೋರಿದ ಸಾಧನೆ, ನೆಟ್ಟ ಮೈಲಿಗಲ್ಲು ಒಂದೆರಡಲ್ಲ. ವಿಶ್ವ ರ‍್ಯಾಂಕಿಂಗ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ಅಮೆರಿಕದ ಹಿಕಾರು ನಕಾಮುರಾ ಎಂಟರ ಘಟ್ಟಕ್ಕೆ ಮೊದಲೇ ಎದುರಾದಾಗ, ಪ್ರಗ್ಗು ಗೆಲ್ಲುವ ವಿಶ್ವಾಸ ಹೆಚ್ಚಿನವರಿಗಿರಲಿಲ್ಲ. ಎಂಟರ ಘಟ್ಟದಲ್ಲಿ ಎದುರಾದುದು ಅರ್ಜುನ್ ಎರಿಗೇಶಿ. ಭಾರತೀಯನೇ ಆದ ಅರ್ಜುನ್, ಪ್ರಗ್ಗುವಿನ ಗೆಳೆಯ ಕೂಡ; ರ‍್ಯಾಂಕಿಂಗ್‌ನಲ್ಲೂ ಮೇಲಿದ್ದವನು. ಗೆಳೆಯರ ನಡುವಿನ ತುರುಸು ಪೋಟಿ ಟೈಬ್ರೇಕ್‌ವರೆಗೂ ಹಿಗ್ಗಿತು. ಸೆಮಿಫೈನಲ್‌ನಲ್ಲಿ ಸವಾಲೆಸೆದುದು ನಂಬರ್ 3 ಆಟಗಾರ ಫ್ಯಾಬಿಯಾನೊ ಕರುವಾನಾ ಎನ್ನುವ ಅಮೆರಿಕನ್. ಕ್ಲಾಸಿಕಲ್ ಚೆಸ್‌ನಲ್ಲಿ ಫ್ಯಾಬಿ ಗಟ್ಟಿಗ. ಆ ಜಗಜ್ಜಾಣನೆದುರು ಪ್ರಗ್ಗು ಆಟ ನಡೆಯದೆಂದೇ ವಿಶ್ವ ಚದುರಂಗದ ವಯ್ಯಾಕರಣಿಗಳು ಲೆಕ್ಕ ಹಾಕಿದ್ದರು. ಮೊದಲೆರಡು ಪಂದ್ಯಗಳು ಡ್ರಾ ಆಗಿ, ಫಲಿತಾಂಶಕ್ಕೆ ಟೈಬ್ರೇಕ್ ಹಂತ ಅನಿವಾರ್ಯ ಎಂದಾದಾಗ ಪ್ರಗ್ಗುವಿನ ಕುರಿತ ನಿರೀಕ್ಷೆಗಳೂ ಗರಿಗೆದರಿದವು. ಭಾರತೀಯರ ನಿರೀಕ್ಷೆಗಳು ಹುಸಿಯಾಗಲಿಲ್ಲ. ಫೈನಲ್ ಅಂಗಳದಲ್ಲಿ ಕಾರ್ಲ್‌ಸನ್ ಎದುರು ಪ್ರಗ್ಗು ಕೂತಾಗಿತ್ತು. ಬಿಗು ಮುಖದ, ಹರಿತ ಕಣ್ನೋಟದ ಮ್ಯಾಗ್ನಸ್ ವರ್ಸಸ್ ನೆರಿಗೆಗಳಿಲ್ಲದ ಮುಖದ, ಶಾಂತ ಕಣ್ಣುಗಳ ಪ್ರಜ್ಞಾನಂದ!

ಸದ್ಯದ ಚದುರಂಗದ ಅಂಗಳದಲ್ಲಿ ಕಾರ್ಲ್‌ಸನ್ ಅರಿಭಯಂಕರನೆಂದೇ ಪ್ರಸಿದ್ಧ. ಆದರೆ, ಈ ಸೋಲಿಲ್ಲದ ಸರದಾರನಿಗೆ ಈವರೆಗೂ ಫಿಡೆ ವಿಶ್ವಕಪ್ ಮುಕುಟ ಮರೀಚಿಕೆಯಾಗಿಯೇ ಉಳಿದಿತ್ತು. ತನ್ನ ಶೋಕೇಸ್‌ನಲ್ಲಿ ಖಾಲಿಯುಳಿದಿದ್ದ ಜಾಗವನ್ನು ತುಂಬುವ ತವಕ ನಾರ್ವೆಯ ಆಟಗಾರನಿಗಿತ್ತು. ಆದರೆ, ಸವಾಲು ಸಾಮಾನ್ಯದ್ದಾಗಿರಲಿಲ್ಲ. ಈ ಮೊದಲಿನ ಮುಖಾಮುಖಿಗಳಲ್ಲಿ ಪ್ರಗ್ಗು ಕಾರ್ಲ್‌ಸನ್‌ಗೆ ಸೋಲಿನ ಕಹಿಯುಣಿಸಿದ್ದ. ಆ ದುಸ್ವಪ್ನ ಮರುಕಳಿಸಬಾರದೆನ್ನುವ ಎಚ್ಚರ ಕಾರ್ಲ್‌ಸನ್‌ಗಿತ್ತು. ಭಾರತೀಯರ ಮನಸ್ಸಿನಲ್ಲಿ ಬೇರೆಯದೇ ಎಣಿಕೆಯಿತ್ತು. ಎಂಟರ ಘಟ್ಟದಲ್ಲಿ ಭಾರತದ ಅಗ್ರಮಾನ್ಯ ಚೆಸ್ಸಿಗ ಡಿ. ಗುಕೇಶ್‌ಗೆ ಕಾರ್ಲ್‌ಸನ್ ಸೋಲುಣಿಸಿದ್ದ. ಅದರ ಮುಯ್ಯಿ ಪ್ರಗ್ಗು ಮೂಲಕ ತೀರಬಹುದೆನ್ನುವ ಲೆಕ್ಕಾಚಾರ ಭಾರತೀಯರದಾಗಿತ್ತು. ಆ ನಿರೀಕ್ಷೆಗೆ ತಕ್ಕಂತೆ ಕ್ಲಾಸಿಕಲ್ ಗೇಮ್‌ನ ಎರಡೂ ಆಟಗಳನ್ನು ಪ್ರಗ್ಗು ಸಮ ಮಾಡಿಕೊಂಡ. ಆಟ ಟೈಬ್ರೇಕ್‌ಗೆ ಹೋದಾಗ, ಎಂಟು ಹಾಗೂ ನಾಲ್ಕರ ಘಟ್ಟದಲ್ಲಿನ ಫಲಿತಾಂಶ ಮರುಕಳಿಸಿ, ಪ್ರಗ್ಗು ಹ್ಯಾಟ್ರಿಕ್ ಪಡೆಯಬಹುದೆನ್ನುವ ಬೆಳ್ಳಿಚುಕ್ಕಿ ಚದುರಂಗದ ರಸಿಕರ ಮನದಂಗಳದಲ್ಲಿ ಮೂಡಿತ್ತು. ಆದರೆ,